2019 ಕ.ತೀ.ವ 1429

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

## ಸುಮಿತ್ರಾ –ವಿರುದ್ಧ– ರಂಗಪ್ಪ ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳ ಮೇರೆಗಿನ ರಿಟ್ ಅರ್ಜಿ.

ಅರ್ಜಿದಾರ – ವಾದಿಯು ದಿನಾಂಕ: 01.07.2019ರ ಆದೇಶವನ್ನು ಪ್ರಶ್ನಿಸಲು ಈ ನ್ಯಾಯಾಲಯದ ರಿಟ್ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸಿ ಮೂಲ ದಾವೆ ಸಂಖ್ಯೆ: 62/2010ರಲ್ಲಿನ ಹಂಚಿಕೆ ಸಂಬಂಧದಲ್ಲಿ ದಾವೆ ಹೂಡಿದ್ದು, ಆಕೆ ಸಲ್ಲಿಸಿದ್ದ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 1908ರ 15ನೇ ಪ್ರಕರಣದೊಂದಿಗೆ ಓದಲಾದ VIನೇ ಕ್ರಮಾದೇಶದ 17ನೇ ನಿಯಮದ ಅಡಿಯಲ್ಲಿ ವಜಾಗೊಳಿಸಲಾಗಿದೆ. ಪ್ರತ್ಯರ್ಜಿದಾರರು ರಿಟ್ ಅರ್ಜಿಯನ್ನು ವಿರೋಧಿಸಿದ್ದಾರೆ.

ತರುವಾಯದ ಹಂತದಲ್ಲಿ ಇತರ ಪ್ರತಿವಾದಿಗಳನ್ನು ಪಕ್ಷಕಾರರನ್ನಾಗಿ ಸೇರಿಸುವ ಸನ್ನಿವೇಶವನ್ನು ಅರ್ಜಿದಾರಳು ತನ್ನ ಅರ್ಜಿ ಸಮರ್ಥನೆಯ ಅಫಿಡಾವಿಟ್‌ನಲ್ಲಿ ನಿರೂಪಿಸಿರುವುದರಿಂದ ತಿದ್ದುಪಡಿಗೆ ಅನುಮತಿ ನೀಡಬೇಕೆಂದು ನಿವೇದಿಸಿಕೊಂಡಿದ್ದಾಳೆ.

ದಾವೆ ಹೂಡಿ 5 ವರ್ಷಗಳು ಗತಿಸಿದ್ದು, ಅರ್ಜಿದಾರಳ ಕೋರಿಕೆಯನ್ನು ಮನ್ನಿಸಬಾರದೆಂದು ಪ್ರತಿವಾದಿಗಳು ಕೋರಿದ್ದಾರೆ.

ಎರಡೂ ಪಕ್ಷಕಾರರ ವಾದಗಳನ್ನು ಆಲಿಸಿ, ವಾದಪತ್ರಗಳನ್ನು ಪರಿಶೀಲಿಸಿ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿನ ಈ ಸಂಬಂಧದ ಷರತ್ತುಗಳನ್ನು ಪರಿಶೀಲಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಹಿಂದೆ ನೀಡಿದ ತೀರ್ಪುಗಳನ್ನು

*ರಿಟ್ ಅರ್ಜಿ ಸಂಖ್ಯೆ: 40750/2014 (ಜಿಎಂ–ಸಿಪಿಸಿ), ದಿನಾಂಕ 29ನೇ ಮೇ, 2019.

**ಪರಿಶೀಲಿಸಿದ ನಂತರ ದಿನಾಂಕ: 1.7.14ರ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ. ವಾದಪತ್ರ ತಿದ್ದುಪಡಿಗಾಗಿ ಅರ್ಜಿದಾರಳಿಗೆ ಅನುಮತಿ ನೀಡಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. 2018 (2) ಎಸ್‌ಸಿಸಿ 137*
*ಮೊಹಿಂದರ್ ಕುಮಾರ್ ಮೆಹ್ರಾ –ವಿರುದ್ಧ–*
*ರೂಪ್‌ರಾಣಿ ಮೆಹ್ರಾ (ಉಲ್ಲೇ) 8*

ಅರ್ಜಿದಾರರ ಪರ: ಶ್ರೀಮತಿ ಮಂಜುಳಾದೇವಿ, ಆರ್. ಕಮದೊಳ್ಳಿ, ನ್ಯಾಯವಾದಿಗಳು.
2 ರಿಂದ 5ನೇ ಪ್ರತ್ಯರ್ಜಿದಾರರ ಪರ: ಶ್ರೀ ಎನ್.ಆರ್. ನಾಯಕ್, ನ್ಯಾಯವಾದಿಗಳು.
9 ಹಾಗೂ 10ನೇ ಪ್ರತ್ಯರ್ಜಿದಾರರ ಪರ:ಶ್ರೀ ಎ.ಡಿ. ರಮಾನಂದ, ನ್ಯಾಯವಾದಿಗಳು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್:**

ಅರ್ಜಿದಾರ – ವಾದಿಯು, ದಿನಾಂಕ 01.07.2014ರ ಆದೇಶವನ್ನು ಪ್ರಶ್ನಿಸಲು ಈ ನ್ಯಾಯಾಲಯದ ರಿಟ್ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸಿ ಮೂಲ ದಾವೆ ಸಂಖ್ಯೆ: 62/2010ರಲ್ಲಿನ ಸ್ವತ್ತಿನ ಹಂಚಿಕೆಗೆ ಸಂಬಂಧಿಸಿದಂತೆ ಒಂದು ದಾವೆಯನ್ನು ಹೂಡಿದ್ದು, ಅದರ ಪ್ರತಿಯು ಅಧಿವಿಚಾರಣಾ ನ್ಯಾಯಾಲಯವು ಸಿದ್ಧಪಡಿಸಿದ ಅನುಬಂಧ–ಜಿ ಯಲ್ಲಿ ಲಭ್ಯವಿರುತ್ತದೆ. VIನೇ ಕ್ರಮಾದೇಶದ 17ನೇ ನಿಯುಮದಡಿಯಲ್ಲಿ ಐ.ಎ. VII ರಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಲಾಗಿದೆ. ನೋಟೀಸನ್ನು ಜಾರಿಗೊಳಿಸಿದ ನಂತರ, ಪ್ರತ್ಯರ್ಜಿದಾರರು

ತಮ್ಮ ಪರ ಮಾನ್ಯ ನ್ಯಾಯವಾದಿಗಳ ಮೂಲಕ ಹಾಜರಾಗಿದ್ದು ಅವರು ರಿಟ್ ಅರ್ಜಿಯನ್ನು ವಿರೋಧಿಸಿದ್ದಾರೆ.

2. ದಾವೆಯ ವಿಚಾರಣೆಯು, ಅದರಲ್ಲಿನ ವಿವಾದಾಂಶಗಳನ್ನು ರೂಪಿಸಿದ ತರುವಾಯ ಪ್ರಾರಂಭವಾಗುತ್ತದೆ ಎಂಬ ಕಾನೂನಿನ ತಪ್ಪು ಪೂರ್ವಭಾವನೆಯ ಕಾರಣದಿಂದ ಸದರಿ ಅರ್ಜಿಯನ್ನು ತಿರಸ್ಕರಿಸಲಾಗಿದೆಯೆಂದು, ಹಾಗಾಗಿ, ನಿರ್ಲಕ್ಷ್ಯದಿಂದ ಅದರ ಮೂಲಕ ಉಂಟಾಗಿರುವ ಅನ್ಯಾಯವನ್ನು ನಿರ್ಧರಿಸಲು ಈ ನ್ಯಾಯಾಲಯದ ತೊಡಗಿಸಿಕೊಳ್ಳುವಿಕೆಯನ್ನು ಖಾತ್ರಿಪಡಿಸುವ ದಾಖಲೆಯಲ್ಲಿ ತಪ್ಪು ಸ್ಪಷ್ಟವಾಗಿ ಕಂಡು ಬಂದಿರುತ್ತದೆ ಎಂದು ಅರ್ಜಿದಾರ-ವಾದಿಯ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀಮತಿ ಮಂಜುಳಾ ಕಮದೊಳ್ಳಿ ಅವರು ವಾದಿಸಿರುತ್ತಾರೆ. ಅಲ್ಲದೆ ಇತರ ಪ್ರತಿವಾದಿಗಳನ್ನು ತರುವಾಯದ ಹಂತದಲ್ಲಿ ಪಕ್ಷಕಾರರನ್ನು ಸೇರಿಸಿರುವುದಕ್ಕೆ ಸಂಬಂಧಿಸಿದ ಸನ್ನಿವೇಶಗಳನ್ನು, ಅರ್ಜಿದಾರಳು ಅರ್ಜಿಯನ್ನು ಸಮರ್ಥಿಸುವಂಥ ತನ್ನ ಅಫಿಡವಿಟ್‌ನಲ್ಲಿ ನಿರೂಪಿಸಿರುವುದರಿಂದ, ಮತ್ತು ಅವರ ಹೆಸರಿನಲ್ಲಿರುವ ಸ್ವತ್ತುಗಳ ಬಗ್ಗೆ ಆಕೆಗೆ ತರುವಾಯದಲ್ಲಷ್ಟೇ ತಿಳಿದು ಬಂದಿರುತ್ತದಾದ್ದರಿಂದ ಹಾಗಿಲ್ಲದಿದ್ದರೂ ಸಹ ತಿದ್ದುಪಡಿಗೆ ಅನುಮತಿ ನೀಡಬೇಕಾಗಿತ್ತು ಎಂದು ಅವರು ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ, ಈ ರಿಟ್ ಅರ್ಜಿಯನ್ನು ಪುರಸ್ಕರಿಸಬೇಕೆಂದು ಅವರು ಕೋರಿದ್ದಾರೆ.

3. ದಾವೆ ಹೂಡಿ ಸುಮಾರು ಐದು ವರ್ಷಗಳು ಗತಿಸಿದ ಬಳಿಕ ಅರ್ಜಿದಾರಳು ಈ ಅರ್ಜಿಯನ್ನು ಸಲ್ಲಿಸಿರುತ್ತಾಳೆ; ಮನವಿ ಅಂಕಣಕ್ಕೆ ಸೇರ್ಪಡೆಗೊಳಿಸಬೇಕೆಂದು ಈಗ ಕೋರಲಾಗಿರುವ ಈ ಸ್ವತ್ತುಗಳ ಬಗ್ಗೆ ತನಗೆ ತಿಳಿದಿರಲಿಲ್ಲವೆಂಬ ಆಕೆಯ ಸಮರ್ಥನೆಯು ಸತ್ಯವಾಗಿರುವುದಿಲ್ಲ; ಈ ಸ್ವತ್ತುಗಳ ಮಾಲೀಕರನ್ನು ತರುವಾಯದಲ್ಲಿ ಪ್ರತಿವಾದಿಗಳನ್ನಾಗಿ ಸೇರಿಸಿಕೊಳ್ಳಲು ಅನುಮತಿಸಲಾಗಿದೆ ಎಂಬ ಸಂಗತಿಯು ಅರ್ಜಿದಾರ-ವಾದಿಯ ಸಹಾಯಕ್ಕೆ ಬರುವುದಿಲ್ಲ ಎಂಬುದಾಗಿ ಪ್ರತ್ಯರ್ಜಿದಾರ ಪ್ರತಿವಾದಿಯ ಪರ ಮಾನ್ಯ ನ್ಯಾಯವಾದಿಗಳು ವಾದಿಸಿರುತ್ತಾರೆ. ಈ ರೀತಿಯಾಗಿ ವಾದಿಸುತ್ತಾ, ಅವರು ರಿಟ್ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

4. ನಾನು ಅರ್ಜಿದಾರಳ ಪರ ಮಾನ್ಯ ನ್ಯಾಯವಾದಿಗಳ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿದ್ದೇನೆ. ನಾನು ಅರ್ಜಿಯ ಪತ್ರಗಳನ್ನು ಪರಿಶೀಲಿಸಿದ್ದೇನೆ.

5. ದಾವೆಯನ್ನು ಸ್ವತ್ತಿನ ಹಂಚಿಕೆಯ ಡಿಕ್ರಿಗಾಗಿ ಮತ್ತು ಉದ್ದೇಶಿತ ಸ್ವತ್ತಿನ ಪ್ರತ್ಯೇಕ ಸ್ವಾಧೀನತೆಗಾಗಿ ಹೂಡಲಾಗಿರುತ್ತದೆ; ವಾದಪತ್ರದ ಮನವಿ ಅಂಕಣಕ್ಕೆ ತಿದ್ದುಪಡಿಯ ಮೂಲಕ ಮಂಡಿಸಲು ಈಗ ಕೋರಿರುವಂತಹ ಸ್ವತ್ತುಗಳ ಮಾಲೀಕರಾಗಿರುವಂತಹ ಇತರ ವ್ಯಕ್ತಿಗಳನ್ನು ತರುವಾಯದ ಹಂತದಲ್ಲಿ ಪ್ರತಿವಾದಿಗಳನ್ನಾಗಿ ಸೇರಿಸಿಕೊಳ್ಳುವುದಕ್ಕೆ ಅನುಮತಿ ನೀಡಲಾಗಿದೆ; ಪ್ರತ್ಯರ್ಜಿದಾರರ ಕಡೆಯಿಂದ ಮಾಡಿರುವ ಪ್ರತಿವಾದವನ್ನು ರುಜುವಾತುಪಡಿಸಿಲ್ಲದಿರುವುದರಿಂದ, ಈ ಹೊಸ ಹೆಚ್ಚುವರಿ ಸ್ವತ್ತುಗಳ ಬಗ್ಗೆ ಅರ್ಜಿದಾರ–ವಾದಿಗೆ ಇತ್ತೀಚೆಗಷ್ಟೇ ತಿಳಿದುಬಂದಿರುತ್ತದೆಂಬ ಆಕೆಯ ಹೇಳಿಕೆಯನ್ನು ಮೇಲ್ನೋಟದಲ್ಲೇ ಅಂಗೀಕರಿಸಬಹುದಾಗಿದೆ.

6. ಅಧಿವಿಚಾರಣಾ ನ್ಯಾಯಾಲಯವು ಮುಖ್ಯವಾಗಿ, ಒಂದು ಬಾರಿ ವಿವಾದಾಂಶಗಳನ್ನು ರೂಪಿಸಿದರೆ, ವಿಚಾರಣೆಯನ್ನು ಪ್ರಾರಂಭಿಸಲಾಗಿದೆಯೆಂದು ಪರಿಭಾವಿಸಲಾಗುತ್ತದೆ ಎಂಬ ಕಾನೂನಿನ ತಪ್ಪಾದ ಪೂರ್ವಭಾವನೆಯ ಕಾರಣದಿಂದ, ವಾದಪತ್ರದ ತಿದ್ದುಪಡಿಗಾಗಿ ಅರ್ಜಿದಾರಳು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ VIನೇ ಕ್ರಮಾದೇಶದ 17ನೇ ನಿಯಮದಲ್ಲಿನ ಪರಂತುಕವನ್ನು ಈ ಕೆಳಗಿನಂತೆ ಓದಲಾಗಿದೆ:

> *"ಪರಂತು, ಯುಕ್ತ ಕಾರ್ಯತತ್ಪರತೆಯ ಹೊರತಾಗಿಯೂ ವಿಚಾರಣೆ ಪ್ರಾರಂಭವಾಗುವ ಮುನ್ನ ಪಕ್ಷಕಾರನು ವಿಷಯವನ್ನು ಪ್ರಸ್ತಾಪಿಸಿರಲು ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ನ್ಯಾಯಾಲಯವು ಬಾರದ ಹೊರತು, ವಿಚಾರಣೆಯು ಪ್ರಾರಂಭವಾದ ತರುವಾಯ ತಿದ್ದುಪಡಿಗಾಗಿ, ಸಲ್ಲಿಸಿರುವ ಯಾವುದೇ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ".*

7. ಯಾವುದೇ ಹಿಂಜರಿಕೆಯಿಲ್ಲದ ಪಕ್ಷಕಾರರು, ದಾವೆ, ಅಪೀಲು ಅಥವಾ ವ್ಯವಹರಣೆ ದೀರ್ಘಗೊಳಿಸುವ ಸಲುವಾಗಿ ರಚಿಸಿರುವಂತಹ ವಾದ ಪತ್ರಗಳನ್ನು ತಿದ್ದುಪಡಿ ಮಾಡುವುದಕ್ಕಾಗಿ ಪ್ರತಿಯೊಂದು ದಾವೆ, ಅಪೀಲು ಅಥವಾ ವ್ಯವಹರಣೆಗಳಲ್ಲಿಯೂ ಅಪರಿವರ್ತನೀಯವಾಗಿ ಅನ್ವಯಿಸುತ್ತಿದ್ದ ಅತ್ಯಂತ ಹಳೆಯ 17ನೇ ನಿಯಮವನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯು (1999 ರ ತಿದ್ದುಪಡಿ ಅಧಿನಿಯಮ) ವಾದ ಪತ್ರಗಳ ತಿದ್ದುಪಡಿಯ ಹಕ್ಕು ದುರ್ಬಳಕೆಯಾಗದಿರುವ ಸಲುವಾಗಿ ಅನಿರ್ದಿಷ್ಟವಾಗಿ ಬಿಟ್ಟುಬಿಟ್ಟಿರುತ್ತದೆ. ವ್ಯಾಜ್ಯವನ್ನು ಸಂಕ್ಷಿಪ್ತಗೊಳಿಸುವ ಉದ್ದೇಶದಿಂದ ಮತ್ತು ಮೊಕದ್ದಮೆಗಳಲ್ಲಿನ ನಿರ್ಣಯವನ್ನು ತ್ವರಿತಗೊಳಿಸುವ ಸಲುವಾಗಿ, ಸಂಸತ್ತು ವಿಲೋಪಿಸಿದ್ದಂತಹ ಈ ಉಪಬಂಧವು ಬಹಳಷ್ಟು ವಿವಾದವನ್ನು ಆಹ್ವಾನಿಸಿದ್ದು, ದೇಶದಾದ್ಯಂತ ಆಂದೋಲನ, ಮುಷ್ಕರಗಳು ಹಾಗೂ ನ್ಯಾಯಾಲಯಗಳ ಬಹಿಷ್ಕಾರಕ್ಕೆ ಎಡೆಮಾಡಿಕೊಟ್ಟಿರುತ್ತದೆ. ಆದ್ದರಿಂದ, ಮೇಲೆ ಹೇಳಿರುವ ಪರಂತುಕದಲ್ಲಿ ಅಧಿನಿಯಮಿಸಿರುವಂಥ ಪ್ರತಿಬಂಧಗಳಿಗೆ ಒಳಪಟ್ಟು ವಾದ ಪತ್ರಗಳನ್ನು ತಿದ್ದುಪಡಿ ಮಾಡುವ ಹಕ್ಕನ್ನು ಪುನಃ ಸ್ಥಾಪಿಸಿ, ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ಅಧಿನಿಯಮ, 2002 ಇದು, ಆ ನಿಯಮಕ್ಕೆ ಒಂದು ಹೊಸದಾದ ಪರಂತುಕವನ್ನು ಸೇರ್ಪಡೆಗೊಳಿಸಿರುತ್ತದೆ.

8. "ವಿಚಾರಣೆಯು ಪ್ರಾರಂಭವಾದ ತರುವಾಯ ತಿದ್ದುಪಡಿಗಾಗಿ ಸಲ್ಲಿಸುವ ಯಾವುದೇ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ . . . ." ಎಂಬ ಪದಾವಳಿಯು ಏಕಾಭಿಪ್ರಾಯಗಳಿಲ್ಲದಿರುವ ಅನೇಕ ಉಚ್ಚ ನ್ಯಾಯಾಲಯಗಳ ಪರಿಗಣನೆಗೆ ಒಳಪಟ್ಟಿರುತ್ತದೆ. ಸಾಮಾನ್ಯವಾಗಿ ಒಂದು ದಾವೆಯ ವಿಚಾರಣೆಯು, ವಿವಾದಾಂಶಗಳನ್ನು ರೂಪಿಸಿ, ಮೊಕದ್ದಮೆಯನ್ನು ಸುನಾವಣೆಗೆ ನಿಗದಿಪಡಿಸಿದ ಬಳಿಕ ಮತ್ತು ಪ್ರಾರಂಭಿಸಲು ಹಕ್ಕುಳ್ಳ ಪಕ್ಷಕಾರನು ತನ್ನ ಸಾಕ್ಷ್ಯವನ್ನು ಹಾಜರುಪಡಿಸಿದ ತರುವಾಯದಲ್ಲಿ ಪ್ರಾರಂಭವಾಗುತ್ತದೆ ಎಂದು ಕಾನೂನನ್ನು ಪರಿವೀಕ್ಷಿಸಿದ ತರುವಾಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿರುತ್ತದೆ. ***ಮೊಹಿಂದರ್ ಕುಮಾರ್ ಮೆಹ್ರಾ –ವಿರುದ್ಧ– ರೂಪ್‌ರಾಣಿ ಮೆಹ್ರಾ*** [1], ಈ ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ 17ನೇ ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:

1. 2018 (2) ಎಸ್‌ಸಿಸಿ 137

*"17. "ವ್ಯವಹರಣೆಯ ಯಾವುದೇ ಹಂತದಲ್ಲಿ" ವಾದ ಪತ್ರಗಳಲ್ಲಿ ತಿದ್ದುಪಡಿ ಮಾಡುವುದನ್ನು VIನೇ ಕ್ರಮಾದೇಶ 17ನೇ ನಿಯಮವು ಅನುಮತಿಸುತ್ತಿದ್ದರೂ ಸಹ, ವಿಚಾರಣೆಯು ಪ್ರಾರಂಭವಾದ ತರುವಾಯ ತಿದ್ದುಪಡಿಗಾಗಿ ಸಲ್ಲಿಸುವ ಯಾವುದೇ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ ಎಂಬ ಸಂಗತಿಗೆ ಪರಂತುಕದ ಮೂಲಕ ಪರಿಮಿತಿಯನ್ನು ಸೇರಿಸಲಾಗಿದೆ. ಯುಕ್ತ ಕಾರ್ಯತತ್ಪರತೆಯ ಹೊರತಾಗಿಯೂ ಪಕ್ಷಕಾರರು ವಿಚಾರಣೆಯು ಆರಂಭವಾಗುವ ಮೊದಲು ವಿಷಯವನ್ನು ಪ್ರಸ್ತಾಪಿಸಿರಲು ಸಾಧ್ಯವಿಲ್ಲ ಎಂದು ಮನವರಿಕೆಯಾದ ನಂತರ ವಾದ ಪತ್ರಗಳಿಗೆ ತಿದ್ದುಪಡಿ ಮಾಡಲು ಪಕ್ಷಕಾರನಿಗೆ ಅನುಮತಿ ನೀಡಿ ಆದೇಶ ಹೊರಡಿಸುವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಕಾಯ್ದಿರಿಸಲಾಗಿರುತ್ತದೆ. ದಾವೆಗೆ ಸಂಬಂಧಿಸಿದಂತೆ ವಿಚಾರಣೆ ಪ್ರಾರಂಭವಾದಾಗ ಸಿವಿಲ್ ಪ್ರಕ್ರಿಯಾ ಸಂಹಿತೆಯ XVIIIನೇ ಕ್ರಮಾದೇಶವು "ದಾವೆಯ ಸುನಾವಣೆ ಮತ್ತು ಸಾಕ್ಷಿದಾರರ ಪರೀಕ್ಷೆ" ಕುರಿತು ವ್ಯವಹರಿಸುತ್ತದೆ. ವಿವಾದಾಂಶಗಳನ್ನು XIVನೇ ಕ್ರಮಾದೇಶದ ಅಡಿಯಲ್ಲಿ ರೂಪಿಸಲಾಗುತ್ತದೆ. ದಾವೆಯ ಮೊದಲನೇ ಸುನಾವಣೆಯಲ್ಲಿ, ವಾದಪತ್ರ ಮತ್ತು ಲಿಖಿತ ಹೇಳಿಕೆಯನ್ನು ಓದಿಕೊಂಡ ಮತ್ತು XIVನೇ ಕ್ರಮಾದೇಶದ 1ನೇ ನಿಯಮದ ಅಡಿಯಲ್ಲಿ ಸಾಕ್ಷಿದಾರರನ್ನು ಪರೀಕ್ಷಿಸಿದ ತರುವಾಯದಲ್ಲಿ ನ್ಯಾಯಾಲಯವು ವಿವಾದಾಂಶಗಳನ್ನು ರೂಪಿಸಬೇಕಾಗುತ್ತದೆ. XVನೇ ಕ್ರಮಾದೇಶವು, ಪಕ್ಷಕಾರರು ಯಾವುದೇ ಕಾನೂನಿನ ಪ್ರಶ್ನೆಯು ಅಥವಾ ಸಂಗತಿಯು ವಿವಾದದಲ್ಲಿರುವುದಿಲ್ಲವೆಂದು ಕಂಡು ಬಂದಾಗ, "ಮೊದಲನೇ ಸುನಾವಣೆಯಲ್ಲಿ ದಾವೆಯ ವಿಲೆ" ಎಂಬ ಅಂಶದೊಂದಿಗೆ ವ್ಯವಹರಿಸುತ್ತದೆ. ವಿವಾದಾಂಶಗಳನ್ನು ರೂಪಿಸಿ, ಸುನಾವಣೆಗಾಗಿ ಮೊಕದ್ದಮೆಯನ್ನು ನಿಗದಿಗೊಳಿಸಿದ ಮತ್ತು ಪ್ರಾರಂಭಿಸುವ ಹಕ್ಕನ್ನು*

*ಹೊಂದಿರುವ ಪಕ್ಷಕಾರನು ತನ್ನ ಸಾಕ್ಷ್ಯವನ್ನು ಹಾಜರುಪಡಿಸಿದ ತರುವಾಯ ದಾವೆಯ ವಿಚಾರಣೆಯು ಆರಂಭವಾಗುತ್ತದೆ".*

9. ಪ್ರಸ್ತುತ ಮೊಕದ್ದಮೆಯಲ್ಲಿ, ಅರ್ಜಿದಾರಳ ದಾವೆಯು ವಿಚಾರಣೆಯ ಹಂತಕ್ಕೆ ಮುಂದುವರೆದಿರುವುದಿಲ್ಲ; ಅರ್ಜಿದಾರಳು ಯುಕ್ತ ಕಾರ್ಯತತ್ಪರತೆಯ ಹೊರತಾಗಿಯೂ ಈಗ ಯುಕ್ತ ಮಾರ್ಗದಲ್ಲಿ ವಾದಪತ್ರದ ಮನವಿ ಅಂಕಣದಲ್ಲಿ ಮಂಡಿಸಬೇಕೆಂದು ಕೋರಲಾಗಿರುವ ಸ್ವತ್ತುಗಳ ಅರಿವು ತನಗಿರಲಿಲ್ಲ ಎಂದು ವಿವರಿಸಿರುತ್ತಾಳೆ. ತಿದ್ದುಪಡಿಯನ್ನು ಅಂಗೀಕರಿಸಿದಲ್ಲಿ ಮತ್ತೊಂದು ಕಡೆಯ ಪಕ್ಷಕಾರರಿಗೆ ಯಾವುದೇ ಬಾಧಕವಾಗುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ತಿದ್ದುಪಡಿಯನ್ನು ಅಂಗೀಕರಿಸದಿದ್ದಲ್ಲಿ, ಈ ಹಂಚಿಕೆಯ ದಾವೆಯಲ್ಲಿ ಅರ್ಜಿದಾರ – ವಾದಿಗೆ ಹೆಚ್ಚಿನ ಬಾಧಕವುಂಟಾಗುತ್ತದೆ. ಪ್ರಶ್ನಿತ ಆದೇಶದಲ್ಲಿ ತಪ್ಪು ಇರುವುದು ಸುಸ್ಪಷ್ಟ.

10. ಮೇಲಿನ ಸನ್ನಿವೇಶದಲ್ಲಿ, ಈ ರಿಟ್ ಅರ್ಜಿಯು ಸಾಧಿತವಾಗುತ್ತದಾದರೂ, ಪ್ರತ್ಯರ್ಜಿದಾರರು ಸಮಾನವಾಗಿ ಹಂಚಿಕೊಳ್ಳಬೇಕಾಗಿರುವ ₹1,000 ಗಳ ಮೊತ್ತವನ್ನು ಅರ್ಜಿದಾರಳು ಸಂದಾಯ ಮಾಡಬೇಕಾಗಿರುತ್ತದೆ; ದಿನಾಂಕ: 01.07.2014ರ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ; ವಾದಪತ್ರದ ತಿದ್ದುಪಡಿಗಾಗಿ ಮಧ್ಯಂತರ ಅರ್ಜಿ ಸಂಖ್ಯೆ: 7ರಲ್ಲಿ ಸಲ್ಲಿಸಿರುವ ಅರ್ಜಿದಾರಳು ಅರ್ಜಿಗೆ ಅನುಮತಿ ನೀಡುವ ಮೂಲಕ ಅನುಕೂಲ ಮಾಡಿಕೊಡಲಾಗಿದೆ. ಅರ್ಜಿದಾರಳು ನಾಲ್ಕು ವಾರಗಳ ಒಳಗಾಗಿ ತಿದ್ದುಪಡಿಯಾದ ವಾದಪತ್ರವನ್ನು ಸಲ್ಲಿಸಬೇಕಾಗಿದ್ದು, ಇನ್ನೊಂದು ಕಡೆಯ ಪಕ್ಷಕಾರರು ತಮ್ಮ ವಾದ ಪತ್ರಗಳನ್ನು ಸಲ್ಲಿಸುವ ಆಯ್ಕೆಯನ್ನು ಹೊಂದಿರುತ್ತಾರೆ.